ಅಪೂರ್ವಳಿಗೆ ಅರಿವಾಗಿತ್ತು.

ಊಟ ಮುಗಿಸಿ ಕೈ ತೊಳೆಯಲು ಹೋದಾಗ ಸೂರ್ಯನನ್ನು ಕಂಡು ಅಪರಿಚಿತನೊಬ್ಬ ಸ್ನೇಹದಿಂದ ಮಾತನಾಡಿಸಿದ. 'ಹೇಯ್..! ಸೂರ್ಯ ಅಲ್ವಾ ನೀನು..?'

ಸೂರ್ಯನಿಗೂ ಅವನ ಗುರುತು ಹತ್ತಿತ್ತು.'ಹ್ಞೂಂ.. ಪ್ರವೀಣ ಹೇಗಿದ್ದೀಯಾ..?'

'ಯಾವಾಗ ಬಂದೆ ಹೊರಗೆ..? ಏನೆಲ್ಲಾ ಆಯ್ತು ಜೀವನ.. ಹುಡುಗಾಟವಾಡಲು ಹೋಗಿ ಜೀವನವೇ ಹಾಳಾಯ್ತಲ್ವಾ..!' ಎಂದು ಖೇದ ವ್ಯಕ್ತಪಡಿಸಿದ.

'ನಿನ್ತಂದೆ ನಿನ್ನನ್ನು ಉಡುಪಿಯ ರೆಸಿಡೆನ್ಶಿಯಲ್ ಶಾಲೆಗೆ ಹಾಕಿದ್ರಲ್ವಾ? ನೀನಲ್ಲೇ ಚೆನ್ನಾಗಿ ಓದಿಕೊಂಡಿದ್ದಿದ್ರೆ.. ಆ ದಿವಸ ಬರ್ತಾನೇ ಇರಲಿಲ್ಲ ಅಲ್ವಾ...? ನೀನು ವಾಪಸ್ಸು ಬಂದು ನಮ್ಜೊತೆ ಸೇರಿ ಹಾಳಾಗ್ತಾ ಇರಲಿಲ್ಲ... ಆ ಘಟನೆನೂ ನಡೀತಾ ಇರಲಿಲ್ಲಾ...' ಎಂದಾಗ ಅಪೂರ್ವಳಿಗೆ ಆತ ಸೂರ್ಯ ಮಾಡಿದ ಕೊಲೆಯ ಬಗ್ಗೆ ಮಾತನಾಡುತ್ತಿರುವನೆಂಬ ಅರಿವಾಯಿತು. ಸೂರ್ಯನೊಂದಿಗೆ ಕೊಲೆಯ ಸಂದರ್ಭದಲ್ಲಿದ್ದ ಹುಡುಗರ ಪೈಕಿ ಈ ವ್ಯಕ್ತಿಯೂ ಇದ್ದನೆಂದು ಅವನ ಮಾತಿನಿಂದ ತಿಳಿಯಿತು.

'ನಾವೆಲ್ಲಾ ಪಾರಾದ್ವಿ...ನಿನ್ನ ಜೀವನ ಮಾತ್ರ ಹಾಳಾಯ್ತು...ನನ್ನನ್ನು ಕ್ಷಮಿಸಿ ಬಿಡ್ತೋ..' ಎಂದು ಕಣ್ಣೀರು ತಂದುಕೊಂಡು ಸೂರ್ಯನನ್ನು ತಬ್ಬಿಕೊಂಡ.

'ಆಗಿದ್ದು ಆಗಿ ಹೋಯ್ತು..ಹುಡುಗಾಟವಾಡಲು ಹೋಗಿ ಏನೇನೋ ಆಯ್ತು...' ಸೂರ್ಯನಿಗೆ ಅಷ್ಟು ಮಾತ್ರ ಹೇಳಲು ಶಕ್ತವಾಯಿತು.

'ಏನ್ಮಾಡಿಕೊಂಡಿದ್ದೀಯಾ ಪ್ರವೀಣ..?' ಸೂರ್ಯ ಆತನನ್ನು ವಿಚಾರಿಸಿದ.

'ಜೀವನ ಸಾಗಿಸಲು ಒಂದು ಕೆಲಸ ಅಂತ ಇದೆ..ಆರಕ್ಕೇರಲ್ಲ ಮೂರಕ್ಕಿಳಿಯಲ್ಲ.. ಹೇಗೋ ನಡೀತಿದೆ.. ಆಗ ಅಪ್ಪ ಅಮ್ಮ ಓದು ಅಂತ ಹೊಡೆದು ಬುದ್ಧಿ ಹೇಳಿದಾಗ ಅರ್ಥವಾಗುವ ಮನಸ್ಥಿತಿ ಇರಲಿಲ್ಲ... ಈಗ ಅವ್ರು ಯಾಕೆ ಹೇಳ್ತಿದ್ರು ಅಂತ ಅರ್ಥವಾಗ್ತಿದೆ...ಆದ್ರೆ ಕಳೆದು ಹೋದ ದಿನ ವಾಪಸ್ಸು ಬರುತ್ತ ಹೇಳು? ಆಗ ಅವ್ರ ಮಾತು ಕೇಳಿದ್ರೆ ಇಂದು ಎಲ್ಲೋ ಇರ್ತಿದ್ವಿ ಬಿಡು...ನಮ್ಮ ಪರಿಸ್ಥಿತಿಗೆ ನಾವೇ ಹೊಣೆಗಾರರು...ಏನಂತೀಯಾ ಸೂರ್ಯ?' ಎಂದವನು ಕ್ಷಣ ನಿಲ್ಲಿಸಿ ಮತ್ತೆ ಮಾತು ಮುಂದುವರೆಸಿದ. 'ನಿಮ್ಮಪ್ಪ ಅಮ್ಮ ಎಷ್ಟು ಬೇಜಾರು ಮಾಡಿಕೊಳ್ತಿದ್ರು ನಿನ್ನ ಬಗ್ಗೆ...ನಿನ್ಗಂತು ನಿನ್ತಂದೆ ತಲೆ ಕಂಡ್ರೆ ಆಗ್ತಾ ಇರಲಿಲ್ಲ... ಅವ್ರು ದಿನಾ ಹೊಡೀತಾರೆ ಅಂತ ಮನೆಗೆ ಹೋಗಲೇ ನೀನು ಬೇಸರ ಮಾಡಿಕೊಳ್ತಿದ್ದೆ...ಆದ್ರೆ.. . ನೀನು ಜೀವನದಲ್ಲಿ ನೆಲೆಗಾಣಬೇಕು ಅನ್ನುವ ಅವ್ರ ಆಸೆ, ನೀನು ದಾರಿ ತಪ್ಪಬಾರದೆನ್ನುವ ಕಳವಳ ಅವ್ರನ್ನ ಹಾಗೆ ಆಡಿಸ್ತಾ ಇತ್ತೇನೋ... ಆಗ ಅರ್ಥ ಮಾಡಿಕೊಳ್ಳುವ ಬುದ್ಧಿ, ವಿವೇಚನೆ ಎರಡೂ ಇರಲಿಲ್ಲ'.

ಅವನ ಪ್ರತೀ ಮಾತು ಕೂಡಾ ಸೂರ್ಯನ ಮನಸ್ಸಿನ ಮೇಲೆ ನೇರವಾಗಿ ಪರಿಣಾಮ ಬೀರುತ್ತಿದೆ ಎಂದು ಅವನ ಮುಖವೇ ಸಾರುತ್ತಿತ್ತು. ಅವನ ಗೆಳೆಯನನ್ನು ಆ ಸಂದರ್ಭದಲ್ಲಿ ಕಳಿಸಿದ ಭಗವಂತನನ್ನು ಮನದಲ್ಲೇ ಕೃತಜ್ಞತೆ ಸಲ್ಲಿಸಿದಳು. ಅವನಿಂದ ಬೀಳ್ಕೊಂಡು ಮೆಟ್ಟಿಲುಗಳು ಇಳಿಯುವಾಗಲೂ ಸೂರ್ಯ ಮೌನವಾಗಿಯೇ ಇದ್ದ. ಅವನ ಮನದಲ್ಲಿ ನಡೆಯುತ್ತಿದ್ದ ಮಂಥನ ದಿಂದ ಅವನೇ ಉತ್ತರ ಕಂಡುಕೊಳ್ಳಲಿ ಎಂದು ಅಪೂರ್ವ ಅವನನ್ನು ಕೆದಕಲು ಹೋಗದೇ ಅವನ ಪಾಡಿಗೆ ಅವನನ್ನು ಬಿಟ್ಟಿದ್ದಳು.

ಅವರಿಬ್ಬರೂ ಹಾಗೇ ಕುಳಿತುಕೊಂಡಿರುವಾಗಲೇ, ಸೂರ್ಯನ ಮೊಬೈಲ್‌ಗೆ ಕರೆ ಬಂದಿತ್ತು. ಸೂರ್ಯ ಮಾತನಾಡಿ ಖುಷಿ ವ್ಯಕ್ತಪಡಿಸಿದ.

'ಓಹ್ ಸರ್. .. ನಿಮ್ಗೆ ನನ್ನ ಹುಟ್ಟಿದ ದಿವಸ ನೆನಪಿದೆಯಾ ಸರ್? ತುಂಬಾ ಖುಷಿಯಾಯ್ತು' ಅವನು ಸ್ವಲ್ಪ ಹೊತು ಮಾತನಾಡುತ್ತ ಸಂಪರ್ಕ ಕಡಿದ.

**ಚರವಾಣಿ**

ರಸಭರಿತ ಕತೆಯುಂಟು ಕೇಳು ಶೈಲು
ಎಲ್ಲರ ಬಳಿಯಲ್ಲೂ ಒಂದೊಂದು ಮೊಬೈಲು
ಪತ್ರಗಳನೆಲ್ಲ ಸರಿಸಿ, ಬಾಷೆಯನೆ ಸಾಯಿಸಿ
ಮೆರೆದಿದೆ ಹೊಸದು ಭಾಷೆಯನೆ ಸೃಜಿಸಿ

★ ಗಿರಿಧರ ಸ್ಥಪತಿ


ವಿಜಯ

ಸೂರ್ಯ ಅಷ್ಟೊಂದು ಗೌರವ ನೀಡಿ ಮಾತನಾಡಿದ ವ್ಯಕ್ತಿ ಯಾರೆಂದು ತಿಳಿಯುವ ಕುತುಹಲ ಅಪೂರ್ವಳಲ್ಲಿ ಮೂಡಿತು. ಅವಳು ಪ್ರಶಿಸುವ ಮೊದಲೇ ಅವನು ಹೇಳಿದ, 'ಈಗ ಫೋನ್ ಮಾಡಿದವ್ರು ಜೈಲರ್ ಪುಟ್ಟಸ್ವಾಮಯ್ಯನವರು... ಜೈಲಲ್ಲಿದ್ದಾಗ ನನ್ನನ್ನು ತುಂಬಾ ಚೆನ್ನಾಗಿ ನೋಡಿಕೊಂಡ್ರು.. ಕರೆದು ಬುದ್ಧಿ ಹೇಳ್ತಿದ್ರು.. ಡಾಕ್ಟ್ರ ಹತ್ರ ನೀನು ಮಾಡಿಸಿದಂತೆ ಕೌನ್ಸಿಲಿಂಗ್ ಕೊಡಿಸ್ತಿದ್ರು...ಅವ್ರ ಮನೆ ಊಟ ಕೊಡ್ತಿದ್ರು.. ನನ್ನ ಬಗ್ಗೆ ಬಹಳ ಅಭಿಮಾನ ಇಟ್ಕೊಂಡಿದ್ರು...ಪ್ರತೀ ಹುಟ್ಟಿದ ಹಬ್ಬಕ್ಕೆ ಸಿಹಿ ಕೊಡ್ತಿದ್ರು...ಇವತ್ತು ನೆನಪಿನಿಂದ ಕರೆ ಮಾಡಿದ್ದಾರೆ...' ಎಂದು ಸಂತೋಷ ವ್ಯಕ್ತಪಡಿಸಿದ.

'ನಿಮ್ಮ ಮೊಬೈಲ್ ನಂಬರ್ ಅವ್ರಿಗೆ ಹೇಗೆ ಸಿಕ್ತು?' ಅಪೂರ್ವ ಪ್ರಶ್ನಿಸಿದಾಗ, ಸೂರ್ಯ ಪೆಚ್ಚಾದ.

'ಗೊತ್ತಿಲ್ಲ' ಎಂದ.

ಆದರೆ ಅಪೂರ್ವಳ ಮನದಾಲ್ಲಾಗಲೇ ಬೇರೆಯೇ ಆಲೋಚನೆ ಓಡುತ್ತಿತ್ತು.

'ಆ ಜೈಲರ್ ನಂಬರ್ ನನ್ಗೆ ಕೊಡ್ತೀರಾ ಸೂರ್ಯ..?' ಅವನು ಏಕೆಂದು ಪ್ರಶ್ನಿಸದೇ ತಮ್ಮ ಮೊಬೈಲ್ ನೀಡಿದ. ಅದರಲ್ಲಿ ಕೊನೆಗೆ ಬಂದ ಪುಟ್ಟಸ್ವಾಮಯ್ಯರವರ ಮೊಬೈಲ್ ಸಂಖ್ಯೆಯನ್ನು ತನ್ನ ಮೊಬೈಲಿಗೆ ದಾಖಲಿಸಿಕೊಂಡಳು ಅಪೂರ್ವ.

ಮನೆಗೆ ಹಿಂದಿರುಗಿದೊಡನೆ ರಾಯರನ್ನು ಕಾಣಲು ಹೋದಾಗ, ಅವರು ನಿದ್ರಿಸುತ್ತಿದರು. ಆರೋಗ್ಯ ಹದಗೆಟ್ಟ ಬಳಿಕ, ಈಗ ಮಧ್ಯಾಹ್ನದ ಹೊತ್ತು ಮನೆಗೆ ಬಂದು ಉಂಡು, ಸಣ್ಣ ನಿದ್ದೆ ತೆಗೆದು ಹೋಗುವುದನ್ನು ರೂಢಿಸಿ ಕೊಂಡಿದ್ದರು. ಅವರನ್ನು ಎಬ್ಬಿಸದೇ, ವಿಜಯಮ್ಮನನ್ನು ಅರಸಿ ಅಡುಗೆ ಮನೆಗೆ ಬಂದು ಅವರನ್ನು ಕಂಡು ವಿಚಾರಿಸಿದಳು, 'ಆಂಟಿ.. ಸ್ವಲ್ಪ ಹೊತ್ತಿನ ಮುಂಚೆ ಸೂರ್ಯನಿಗೆ ಯಾರದಾದ್ರೂ ಫೋನ್ ಬಂದಿತ್ತಾ?'

'ನಿನ್ನ ಅಂಕಲ್ ಊಟ ಮಾಡೋವಾಗ ಫೋನ್ ಬಂದಂಗಿತ್ತು... ಅವ್ರೇ ಮಾತನಾಡಿ ಸೂರ್ಯನ ಮೊಬೈಲ್ ನಂಬರ್ ಕೊಟ್ರು...ಅವ್ರ ಮೊಬೈಲ್‌ಗೇ ಕರೆ ಬಂದಿತ್ತು' ಎಂದಾಗಲಂತೂ ಅಪೂರ್ವಳ ಅನುಮಾನ ದೃಢವಾಯಿತು. ಆಗ ಫಕ್ಕನೇ ಸೂರ್ಯ ಮೊದಲ ದಿನ ಈ ಮನೆಗೆ ಬಂದಾಗ ರಾಯರು ಸಿಟ್ಟಿನ ಭರದಲ್ಲಿ, ಸೂರ್ಯ, ರೌಡಿ ಗೋಪಿ ಸಂಪರ್ಕದಲ್ಲಿದ್ದು ಕಳ್ಳತನ ಮಾಡುತ್ತಿದ್ದಾನೆ ಎಂದು ಹೇಳಿದ್ದು ನೆನಪಾಗಿತ್ತು. ಆ ಸತ್ಯವೆಲ್ಲಾ ರಾಯರಿಗೆ ಹೇಗೆ ತಿಳಿದಿತ್ತು..? ಅಂದ ಬಳಿಕ ಪುಟ್ಟಸ್ವಾಮಯ್ಯನವರು, ಪ್ರಭಾಕರರಾಯರ ಸಂಪರ್ಕದಲ್ಲಿದ್ದಾರೆ.. ತಾನೊಮ್ಮೆ ಏಕೆ ಪುಟ್ಟಸ್ವಾಮಯ್ಯನವರನ್ನು ಕಂಡು ಮಾತನಾಡಿಸಬಾರದು..? ಎಂಬ ಯೋಚನೆ ಬಂದೊಡನೆ ಅವಳು ತಡ ಮಾಡಲಿಲ್ಲ. ಸೂರ್ಯನಿಂದ ಪಡೆದ ಮೊಬೈಲ್ ಸಂಖ್ಯೆಗೆ ಕರೆ ಮಾಡುತ್ತ ತನ್ನನ್ನು ತಾನು ಪರಿಚಯಿಸಿಕೊಂಡಳು. ಸೂರ್ಯನ ಕುರಿತು ಮಾತನಾಡಬೇಕು ಎಂದು ತಿಳಿಸಿದೊಡನೆ ಆತ ಮರುದಿನ ಬೆಳಿಗ್ಗೆ ಭೇಟಿಯಾಗುವಂತೆ ಹತ್ತಿರದ ಹಲಸೂರು ಸ್ಟೇಶನಿನ ಬಳಿ ಬರಲು ತಿಳಿಸಿದರು. ಮರುದಿನ ಅಪೂರ್ವ ಪುಟ್ಟಸ್ವಾಮಯ್ಯರವರನ್ನು ಕಂಡು ಮಾತನಾಡಿಸಿ ತನ್ನ ಅನುಮಾನವನ್ನು ಬಗೆ ಹರಿಸಿಕೊಂಡಾಗ ಅವಳ ಮುಖದಲ್ಲಿ ಸಂತೃಪ್ತಿಯ ಭಾವ ಮೂಡಿತ್ತು.

* * *

'ಅಪೂರ್ವ..? ನಾವೀಗ ಎಲ್ಲಿಗೆ ಹೋಗ್ತಾ ಇದ್ದೀವಿ..?' ಆಟೋದಲ್ಲಿ ಅಪೂರ್ವಳ ಪಕ್ಕ ಕುಳಿತಿದ್ದ ಸೂರ್ಯ ಆರನೆಯ ಬಾರಿ ಕೇಳಿದ.

'ಬಂತು.. ಇರಿ...' ಇಬ್ಬರೂ ಆಟೋದಿಂದ ಕೆಳಗಿಳಿದರು. ಹಲಸೂರು ಠಾಣೆಯ ಎದುರು ಆಟೋ ನಿಂತದ್ದನ್ನು ಕಂಡು ಸೂರ್ಯನ ಮುಖ ಬಿಳಿಚಿಕೊಂಡಿತು.

'ಸ್ಟೇಶನ್‌ಗೆ ಯಾಕೆ ಕರ್ಕೊಂಡು ಬಂದಿದ್ಯಾ..?' ಎಂದ ಅವನ ಮುಖದಲ್ಲಿ ಸಣ್ಣ ಆತಂಕವಿರುವುದನ್ನು ಅವಳು ಗಮನಿಸುತ್ತ, 'ಗಾಬರಿಯಾಗಬೇಡಿ.. ಸೂರ್ಯ ..ಇಲ್ಲಿ ನಿಮ್ಗೆ ತುಂಬಾ ಬೇಕಾದವರು ನಿಮಗೋಸ್ಕರ ಕಾಯ್ತಾ ಇದ್ದಾರೆ' ಎಂದು ಅವನನ್ನು ಸ್ಟೇಷನಿನ ಒಳಗೆ ಕರೆ ತಂದಳು. ಇನ್ಸ್‌ಪೆಕ್ಟರ್ ಒಡನೆ ಹರಟುತ್ತಿದ್ದ ಪುಟ್ಟಸ್ವಾಮಯ್ಯನವರು ಇವರು ಬಂದಿರುವುದನ್ನು ಅರಿತು ಎದ್ದು ಬಂದು ಸೂರ್ಯನನ್ನು ಕಂಡು ಕಣ್ಣರಳಿಸಿ ಅವನನ್ನು ಅಪ್ಪಿಕೊಂಡರು. 'ಸೂರ್ಯ ತುಂಬಾ ಬದಲಾಗಿದ್ದೀಯಾ.. ಹೇಗಿದ್ದೀಯಾ..?'

'ಚೆನ್ನಾಗಿದ್ದೀನಿ..' ಚುಟುಕಾಗಿ ಪ್ರತಿಕ್ರಿಯಿಸಿದ. ಪುಟ್ಟಸ್ವಾಮಯ್ಯನವರು ತನ್ನನ್ನು ಕಾಣಲು ಏಕೆ ಕಾಯುತ್ತಿದ್ದರೆಂದು ಅರಿಯದೇ ಅಯೋಮಯ ಮನಸ್ಥಿತಿಯಲ್ಲಿದ್ದ.